**<u>3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು</u>**

<u>ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ</u>

**<u>C.C. No.1684/2018</u>**

**CW- 6** **PW:7**

| | |
|---|---|
| ಸಾಕ್ಷಿಯ ಹೆಸರು | ಃ ಶ್ರೀಮತಿ ಲಕ್ಷ್ಮಿ ದೊಡಮನಿ |
| ತಂದೆ /ಗಂಡನ ಹೆಸರು | ಃ ಫಕ್ಕಿರಪ್ಪ |
| ವಯಸ್ಸು | ಃ 46 ವರ್ಷ |
| ಉದ್ಯೋಗ | ಃ ಕೂಲಿ ಕೆಲಸ |
| ವಾಸಸ್ಥಳ | ಃ ಅಮರಗೋಳ, ಹುಬ್ಬಳ್ಳಿ |

ದಿಃ **21.05.2026.** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ**

ಚಾಸಾಃ 1 ನನ್ನ ತಾಯಿ. ಚಾಸಾಃ 2 ಮತ್ತು 3 ರವರ ಪರಿಚಯ ಇದೆ. ಚಾಸಾಃ 4 ಮತ್ತು 5 ನನಗೆ ತಮ್ಮಂದಿರು. ಚಾಸಾಃ 7 ಮತ್ತು 8 ರವರು ಗೊತ್ತು. ಚಾಸಾಃ 9 ರವರು ನನ್ನ ಅಣ್ಣ. ಆರೋಪಿತರು ನಮ್ಮ ಓಣಿಯವರು ಮತ್ತು ಅವರ ಬಗ್ಗೆ ಗೊತ್ತು. ದಿಃ 30.10.2017 ರಂದು ಕಚ್ಚಾ ರಸ್ತೆಯನ್ನು ರೋಡ ಮಾಡಿಸುವ ಸಲುವಾಗಿ ಒಂದು ವಾರದ ಮುಂಚೆ ಓಣಿಯ ಹಿರಿಯರ ಜೊತೆ ಮಾತನಾಡಿದ್ದೆವು. ಆನಂತರ 1 ನೇ ಆರೋಪಿಗೆ ನನ್ನ ಸಹೋದರ ಚಾಸಾಃ 4 ರಸ್ತೆ ಮಾಡಿಸುತ್ತೇವೆ ಅಂತಾ ಹೇಳಿದ ಆಗ 1 ನೇ ಆರೋಪಿ ರಸ್ತೆ ಮಾಡಿಸಬೇಡಿ, ಮಾಡಿದರೆ ತಮ್ಮ ಮನೆಯ ಕಡೆ ಜಾಗ ಹೊಗುತ್ತದೆ ಅಂತಾ ಹೇಳಿದರು. ಆಗ 1 ನೇ ಆರೋಪಿ ಮತ್ತು ಚಾಸಾಃ 4 ರವರ ಮದ್ಯೆ ಬಾಯಿಗೆ ಬಾಯಿ ಆಗುತ್ತಿತ್ತು ಅಷ್ಟರಲ್ಲಿ ನಾನು, ಚಾಸಾಃ 1 ಮನೆಯಲ್ಲಿದ್ದವರು ಬಾಯಿ ಆಗುವ ಸ್ಥಳಕ್ಕೆ ಹೋದೆವು. ಆಗ 1 ನೇ ಆರೋಪಿ ಚಾಸಾಃ 4 ರವರ ಕಪಾಳಗೆ ಹೊಡೆದ. ನಾವೆಲ್ಲರೂ 1 ನೇ ಆರೋಪಿಗೆ ಏಕೆ ಹೊಡೆಯುತ್ತಿಯಾ ಅಂತಾ ಬಾಯಿ ಮಾಡಿದೆವು, ಆಗ 1 ನೇ ಆರೋಪಿಯ ಮನೆಯವರು ಅಲ್ಲಿಗೆ ಬಂದರು. ಆರೋಪಿ 2 ರಿಂದ 4 ರವರು ಘಟನಾ ಸ್ಥಳಕ್ಕೆ ಬಡಿಗೆ ತೆಗೆದುಕೊಂಡು ಬಂದು ಇವರನ್ನು ನೋಡಿಯೆ ಬಿಡೋಣ ರೋಡ ಮಾಡಿಸಿಕೊಡುವುದು ಬೇಡ ಅಂತಾ ಅಂದರು. ಚಾಸಾಃ 4 ಮತ್ತು 5 ರವರಿಗೆ ಆರೋಪಿ

2 ಮತ್ತು 4 ರವರು ಬಡಿಗೆಯಿಂದ ಹೊಡೆದರು. ಸದರಿ ಆರೋಪಿತರು ಅವರಿಬ್ಬರ ಕುತ್ತಿಗೆಗೆ ಹಾಗೂ ಮೈ ಕೈಗೆ ಹೊಡೆದರು. ನಾನು ಮತ್ತು ಚಾಸಾಃ 1 ರವರು ಬಾಯಿ ಮಾಡಿದ್ದರಿಂದ ಆರೋಪಿ 5 ಮತ್ತು 6 ರವರು ನಮ್ಮ ಸೀರೆ ಹಿಡಿದು ಜಗ್ಗಾಡಿ ನಮ್ಮನ್ನು ಎಳೆದಾಡಿದರು. ಆಮೇಲೆ ಓಣಿಯ ಹಿರಿಯರಾದ ಚಾಸಾಃ 7 ಮತ್ತು 8 ರವರನ್ನು ಕರೆಸಿದೆವು. ಆ ಇಬ್ಬರು ಹಿರಿಯರು ನಮಗೂ ಬೈದರು ಮತ್ತು ಆರೋಪಿತರಿಗೂ ಬೈದರು. ಆಗ ಆರೋಪಿತರು ನಮ್ಮದು ಬಹಳ ಆಗಿದೆ ಬಿಡುವುದಿಲ್ಲ ಅಂತಾ ಹೇಳಿ ಅಲ್ಲಿಂದ ಹೋದರು. ಈ ಘಟನೆ ಆದಾಗ ಮದ್ಯಾಹ್ನ 12.15 ರಿಂದ 12.30 ಆಗಿತ್ತು. ನ್ಯಾಯಾಲಯದ ಮುಂದೆ ಇರುವ ಮು ಮಾ1 ಮತ್ತು 2 ನ್ನು ಆ ದಿವಸ ಆರೋಪಿ 2 ಮತ್ತು 4 ರವರು ಘಟನಾ ಸ್ಥಳಕ್ಕೆ ತೆಗೆದುಕೊಂಡುರ ಬಂದಿದ್ದರು. ಘಟನೆಯಾದ ಮೇಲೆ ಓಣಿಯ ಹಿರಿಯರು ಸೇರಿದರು ನಂತರ 4-5 ದಿವಸ ಆದಮೇಲೆ ನನ್ನ ತಾಯಿ ಚಾಸಾಃ 1 ದೂರು ಕೊಟ್ಟರು. ಈ ಘಟನೆಯ ಬಗ್ಗೆ ಪೊಲಿಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆ.

**ಪಾಟಿಸವಾಲುಃ ಆರೋಪಿ ಪರ ಶ್ರೀ ಐ ಎಸ್ ಟಿ ವಕೀಲರಿಂದಃ**

ಚಾಸಾಃ 1 ನನ್ನ ತಾಯಿ. ಚಾಸಾಃ 7 ಮತ್ತು 8 ರವರು ನನ್ನ ಮಾವಂದಿರು ಎಂದರೆ ಸರಿ. ಚಾಸಾಃ 9 ನನ್ನ ಅಣ್ಣ. ಚಾಸಾಃ 3 ರವರು ಸಿಸಿ.1685/2018 ರಲ್ಲಿನ ಆರೋಪಿಯಾದ ವಿರೇಶ ದೊಡಮನಿಯವರ ತಂದೆ ಎಂದರೆ ಸರಿ. ನನ್ನನ್ನು ಬುಡರಸಿಂಗಿ ಗ್ರಾಮಕ್ಕೆ ಮದುವೆ ಮಾಡಿಕೊಟ್ಟಿದ್ದಾರೆ. ನಾನು ಮದುವೆಯಾದಾಗಿನಿಂದ ನನ್ನ ಗಂಡನ ಮನೆಯಲ್ಲಿ ವಾಸವಾಗಿದ್ದೇನೆ. ಘಟನೆ ನಡೆದ ದಿವಸ ನಾನು ಪೊಲಿಸ್ ಠಾಣೆಗೆ ಹೋಗಿದ್ದೆ. ಸಾಕ್ಷಿ ಮುಂದುವರೆದು ಆ ದಿವಸ ಪೊಲಿಸ್ ಠಾಣೆಗೆ ಹೋಗಿಲ್ಲ ಪೊಲಿಸರು ನಮ್ಮ ಮನೆಯ ಹತ್ತಿರ ಬಂದಿದ್ದರು ಆವಾಗ ಬೇಟಿಯಾಗಿದ್ದೇವೆ ಎಂದು ನುಡಿಯುತ್ತಾರೆ. ಪೊಲಿಸರು ಬಂದಾಗ ಮದ್ಯಾಹ್ನ ಆಗಿರಬೇಕು. ನಿಖರವಾಗಿ ಗೊತ್ತಿಲ್ಲ. ಪೊಲಿಸರ ಜೊತೆ ಮತ್ಯಾರು ಬಂದಿದ್ದರು ಎಂದು ಹೇಳಲು ಆಗುವುದಿಲ್ಲ. ಪೊಲಿಸರ ಹತ್ತಿರ ನಮ್ಮ ತಾಯಿ ಹೋಗಿದ್ದರು. ನಾನು ಪೊಲಿಸರ ಹತ್ತಿರ ಹೋಗಿಲ್ಲ ಎಂದರೆ ಸರಿ. ಪೊಲಿಸರು ವಿಚಾರ ಮಾಡಿದಾಗ ನಾವೆಲ್ಲರೂ ಸೇರಿಯೆ ಹೇಳಿದ್ದೇವೆ. ಪೊಲಿಸರು ವಿಚಾರ ಮಾಡಿರುವ ಸಂಗತಿಯನ್ನು ನನ್ನ ಹೇಳಿಕೆಯಲ್ಲಿ ಹೇಳಿಲ್ಲ. ನಾನು ಪೊಲಿಸ್ ಠಾಣೆಗೆ ಹೋಗಿಲ್ಲ ಹಾಗೂ ಯಾವದೇ ಹೇಳಿಕೆ

ಕೊಟ್ಟಿಲ್ಲ ಎಂದರೆ ಸರಿ. ಘಟನೆ ನಡೇದಿದೆ ಅಂತಾ ಹೇಳುವ ಸ್ಥಳದಲ್ಲಿ ನಾನಾಗಲಿ ಮತ್ತು ನನ್ನ ತಾಯಿ ಚಾಸಾಃ 1 ಆಗಲಿ ಇರಲಿಲ್ಲ ಎಂದರೆ ಸರಿಯಲ್ಲ. ಆ ದಿವಸ ಆರೋಪಿತರು ಯಾವದೇ ರೀತಿಯಿಂದ ನನ್ನ ತಾಯಿ ಹೇಳುವ ಹಾಗೆ ಘಟನೆ ನಡೆಯದೇ ಇದ್ದರೂ ಸಹ ಸುಳ್ಳು ದೂರು ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಆ ದಿವಸ ನಾನು ನಮಂ ಮನೆಯಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಚಾಸಾಃ 1 ರಿಂದ 5, 7,8 ಹಾಗೂ ನನಗೆ ಸೇರಿದ ಜಾಗೆ ಹಾಗೂ ಮನೆಗಳು ಘಟನಾ ಸ್ಥಳದ ರಸ್ತೆಗೆ ಹೊಂದಿಕೊಂಡಂತೆ ಇವೆ ಎಂದರೆ ಸರಿ. ನಾವೆಲ್ಲರೂ ನಮ್ಮ ಮನೆಯ ಹಾಗೂ ಜಾಗಗಳಿಗೆ ಹೋಗುವ ಸಲುವಾಗಿ ರಸ್ತೆ ಇರದಿದ್ದರೂ ರಸ್ತೆ ಇದೆ ಅಂತಾ ಹೇಳಿ ಸುಳ್ಳು ದೂರು ಕೊಟ್ಟರೆ ನಮಗೆ ರಸ್ತೆ ಬಿಡುತ್ತಾರೆ ಅಂತಾ ಹೇಳಿ ಸುಳ್ಳು ದೂರು ಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಜಾಗ ಕೊಟ್ಟವರು ಇಲ್ಲಿ ರಸ್ತೆ ಇದೆ ಅಂತಾ ಹೇಳಿಯೆ ನಮಗೆ ಜಾಗ ಕೊಟ್ಟರು ಎಂದು ನುಡಿಯುತ್ತಾರೆ. ಜಾಗ ಹಿಡಿಯುವುದಕಿಂತ ಮೊದಲು ನಕಾಶೆ ನೋಡಿದ್ದೆವೊ ಇಲ್ಲವೊ ಗೊತ್ತಿಲ್ಲ. ಚಾಸಾಃ 8 ರವರ ಅಣ್ಣನ ಮಕ್ಕಳೆ ಚಾಸಾಃ 4 ಮತ್ತು 5 ರವರ ಹೆಂಡತಿಯರು ಎಂದರೆ ಸರಿ. ಘಟನೆ ನಡೆದ ದಿವಸ ನನ್ನ ತಮ್ಮಂದಿರಾದ ಚಾಸಾಃ 4 ಮತ್ತು 5 ರವರು ಠಾಣೆಗೆ ಹೋಗಿಲ್ಲ ಎಂದರೆ ಸರಿ. ಚಾಸಾಃ 4 ಮತ್ತು 5 ರವರು ಘಟನೆ ಆದಮೇಲೆ ಸ್ಥಳದಲ್ಲೆ ಇದ್ದು ಆಸ್ಪತ್ರೆಗೆ ಚಿಕಿತ್ಸೆ ಪಡೆಯಲು ಹೋದರೊ ಇಲ್ಲವೊ ಎನ್ನುವುದು ನನಗೆ ಗೊತ್ತಿಲ್ಲ. ನಾನು ಮತ್ತು ಚಾಸಾಃ 1 ರವರ ಘಟನಾ ಸ್ಥಳದಲ್ಲಿ ಇರದೇ ಇದ್ದರೂ ಸಹ ಆರೋಪಿ 5 ಮತ್ತು 6 ರವರು ಬಂದು ನಮ್ಮ ಸೀರೆ ಹಿಡಿದು ಎಳೆದಾಡಿದರು ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಓಣಿಯ ಹಿರಿಯ ಹೆಸರು ಮತ್ತು ಯಾವಾಗ ರಸ್ತೆ ಸಲುವಾಗಿ ಮಾತನಾಡಲು ಕೂಡಿದ್ದರು ಅಂತಾ ಹೇಳಿ ಬರೆಸಿಲ್ಲ. ಘಟನೇ ನಡೆದಿದೇ ಅಂತಾ ಹೇಳುವ ದಿವಸ ನಾನು ಮನೆಯಲ್ಲೆ ಇದ್ದೆ. ಚಾಸಾಃ4 ಮತ್ತು 1 ನೇ ಆರೋಪಿ ಮದ್ಯೆ ರಸ್ತೆಯ ವಿಚಾರವಾಗಿ ಬಾಯಿಗೆ ಬಾಯಿ ಆಗಿ 1 ನೇ ಆರೋಪಿ ಚಾಸಾಃ 4 ರವರ ಕಪಾಳಗೆ ಹೊಡೆದ ಇವರಿಬ್ಬರ ಮದ್ಯೆ ಬಾಯಿ ಆಯಿತು ಅಂತಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಏಕೆ ಬಾಯಿ ಮಾಡುತ್ತಿರಿ ಅಂತಾ 1 ನೇ ಆರೋಪಿಯನ್ನು ಕೇಳಿದಾಗ ಉಳಿದ ಆರೋಪಿತರಾದ 2 ರಿಂದ 6 ರವರು ಘಟನಾ ಸ್ಥಳಕ್ಕೆ ಬಂದರು ಹಾಗೂ ಆರೋಪಿ 2 ಮತ್ತು 4 ನೇ ಆರೋಪಿ ಕೈಯಲ್ಲಿ ಬಡಿಗೆ ಹಿಡಿದುಕೊಂಡು

ಬಂದರು ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾಃ 4 ಮತ್ತು 5 ರವರ ಕುತ್ತಿಗೆಗೆ ಹಾಗೂ ಮೈ ಕೈಗೆ ಹೊಡೆದರು ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮು ಮಾ 1 ಮತ್ತು 2 ರ ತರಹದ ಕಟ್ಟಿಗೆಗಳು ಎಲ್ಲರ ಮನೆಯಲ್ಲಿ ಸಾಮಾನ್ಯವಾಗಿ ಸಿಗುತ್ತವೆ ಎಂದರೆ ಸರಿ. ಮು ಮಾ 1 ಮತ್ತು 2 ಕಟ್ಟಿಗೆಗಳನ್ನು ನನ್ನ ತಾಯಿ ಪೊಲಿಸರಿಗೆ ಕೊಟ್ಟಿದ್ದಾರೆ ಎಂದರೆ ಸರಿ.

1 ನೇ ಆರೋಪಿಗೆ ಆ ದಿವಸ ನನ್ನ ತಮ್ಮಂದಿರಾದ ಚಾಸಾಃ 4 ಮತ್ತು 5 ರವರ ತಲೆ ಒಡೆದು 1 ನೇ ಆರೋಪಿ 15 ದಿವಸ ಚಿಕಿತ್ಸೆ ಪಡೆದಿದ್ದಾನೆ ಎಂದರೆ ಸರಿಯಲ್ಲ. ನನ್ನ ತಮ್ಮಂದಿರು ಚಾಸಾಃ 4,5,7,8 ಹಾಗೂ ವಿರೇಶ ದೊಡಮನಿ ಇವರ ಮೇಲೆ 1 ನೇ ಆರೋಪಿ ದೂರು ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಆವತ್ತಿನಿಂದ ಇವರೆಲ್ಲರೂ ತಲೆಮರಿಸಿಕೊಂಡಿದ್ದರು ಎಂದರೆ ಸರಿಯಲ್ಲ. 1 ನೇ ಆರೋಪಿ ನೀಡಿದ ದೂರಿನಿಂದ ಬಚಾವ್ ಆಗುವ ಸಲುವಾಗಿ ನನ್ನ ತಾಯಿ ಗೋವಾಕ್ಕೆ ಹೋದವರು ಮರಳಿ ಬಂದು ದಿಃ 06.11.2017 ರಂದು ದೂರು ಕೊಟ್ಟಿದ್ದಾರೆ ಎಂದರೆ ಸಾಕ್ಷಿ ತನ್ನ ತಾಯಿ ಊರಲ್ಲೆ ಇದ್ದು ಗೋವಾಕ್ಕೆ ಹೋಗಿಲ್ಲ ಎಂದು ನುಡಿಯುತ್ತಾರೆ. ನನ್ನ ತಾಯಿ ಕೊಟ್ಟ ದೂರಿಗೆ ಅನುಸಾರವಾಗಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮಗೆ ಓಡಾಡಲು ಇರದಿದ್ದರೂ ಸಹ 1 ನೇ ಆರೋಪಿಗೆ ಸೇರಿದ ಪಿತ್ರಾರ್ಜಿತ ಆಸ್ತಿಯಲ್ಲಿ ರಸ್ತೆ ಮಾಡಿಸಬೇಕು ಅಂತಾ ಈ ರೀತಿ ಸುಳ್ಳು ಫಿರ್ಯಾದಿ ಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ನಾನು ಯಾವತ್ತು ಪೊಲಿಸ್ ಠಾಣೆಗೆ ಹೋಗಿಲ್ಲ ಎಂದರೆ ಸರಿ. ಪೊಲಿಸರು ಘಟನಾ ಸ್ಥಳಕ್ಕೆ ಘಟನೆ ನಡೆದ ದಿವಸ ಬಂದ್ದಿದ್ದರು ಎಂದು ನುಡಿಯುತ್ತಾರೆ

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

**(ಶ್ರೀ ರಮೇಶ ಎಸ್ ಗಾಣಿಗೇರ)**

**3 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**